ಪಿ-ಡಬ್ಲ್ಯೂ-1

**ಇಂದು ದಿಃ 28-10-2022 ರಂದು ಮುಕ್ತ ನ್ಯಾಯಾಲಯದಲ್ಲಿ ಹಾಜರಿದ್ದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 1 ರಿಂದ 3 ನೇ ಪ್ರತಿವಾದಿಗಳ ಪರ ಶ್ರೀ ಕೆ. ಬಿ. ಎಚ್ ವಕೀಲರಿಂದಃ**

ಕರಿಬಸಪ್ಪ ಬಿನ್ ನಂಜಪ್ಪ ಎನ್ನುವವರು ನನಗೆ ತಂದೆಯಾಗಬೇಕು. ನಮ್ಮ ತಂದೆಗೆ ಇಬ್ಬರು ಹೆಂಡತಿಯರು. 1.ಗೌರಮ್ಮ ಮತ್ತು 2. ಗಿರೀಜಮ್ಮ. ಗೌರಮ್ಮ ಜೀವಂತ ಇದ್ದಾಗಲೇ ನಮ್ಮ ತಂದೆ ಗಿರೀಜಮ್ಮಳನ್ನು 2 ನೇ ಬಾರಿ ಮಧುವೆಯಾಗಿದ್ದರು. ನಮ್ಮ ತಂದೆ 2 ನೇ ಮದುವೆಯಾಗುವಾಗ ಗೌರಮ್ಮಳ ಒಪ್ಪಿಗೆ ಪಡೆದಿದ್ದಾರೆಯೇ ಎಂದರೆ ಸಾಕ್ಷಿಯು, ಗಂಡು ಮಕ್ಕಳು ಇಲ್ಲ ಎಂದು 2 ನೇ ಮದುವೆಯಾಗಿದ್ದಾರೆ. ಗೌರಮ್ಮ ಎನ್ನುವವರಿಗೆ ಇಬ್ಬರು ಹೆಣ್ಣು ಮಕ್ಕಳು, ಒಬ್ಬ ಗಂಡು ಮಗನಿದ್ದು, ಆತನು ವಯಸ್ಕನಾದ ಮೇಲೆ ಅನಾರೋಗ್ಯನಾಗಿ ಮೃತಪಟ್ಟಿದ್ದಾನೆ. ನಮ್ಮ ತಂದೆಗೆ ನಾನು ಮತ್ತು ಪ್ರಮೀಳಮ್ಮ 1 ನೇ ಹೆಂಡತಿ ಗೌರಮ್ಮಳ ಮಕ್ಕಳಾಗಿರುತ್ತೇವೆ. ಪ್ರಮೀಳಮ್ಮನ ಗಂಡನ ಹೆಸರು ವೀರನಗೌಡ. ಪ್ರಮೀಳಮ್ಮನಿಗೆ ಇಬ್ಬರು ಮಕ್ಕಳಿದ್ದು, 1.ಕುಮಾರ ಮತ್ತು 2.ರಂಜಿತ. ಪ್ರಮೀಳಮ್ಮ ಮೃತಪಟ್ಟಾಗ, ನನಗೂ ಮದುವೆಯಾಗಿ ಮಕ್ಕಳಿದ್ದರು. ನಮ್ಮ ತಂದೆಯ 2 ನೇ ಹೆಂಡತಿ ಗಿರೀಜಮ್ಮನಿಗೆ 1.ಅನುರಾಧ ಮತ್ತು 2.ಹನುಮಂತಗೌಡ ಎನ್ನುವ ಇಬ್ಬರು ಮಕ್ಕಳಿದ್ದಾರೆ. ನಮ್ಮ ತಂದೆ 4-5 ವರ್ಷಗಳ ಹಿಂದೆ ಮೃತಪಟ್ಟಿದ್ದಾರೆ. ನಮ್ಮ ಮದುವೆಯನ್ನು ನಮ್ಮ ತಂದೆಯೇ ಮಾಡಿದ್ದಾರೆ. ನಮ್ಮ ತಂದೆಯು ನನ್ನ, ಪ್ರಮೀಳಮ್ಮ ಮತ್ತು ಅನುರಾಧ ಎನ್ನುವವರ ಮದುವೆಯನ್ನು ಮಾಡಿದ್ದಾರೆ. ನನ್ನ, ಪ್ರಮೀಳಮ್ಮ ಮತ್ತು ಅನುರಾಧ ಎನ್ನುವವರ ಮದುವೆಗೆ ನಮ್ಮ ತಂದೆ ಸಾಕಷ್ಟು ಹಣ ಖರ್ಚು ಮಾಡಿದ್ದಾರೆಂದರೆ ಸರಿ. ದಾವಾ ಆಸ್ತಿಗಳು ನಮ್ಮ ತಂದೆಗೆ ಪಿತ್ರಾರ್ಜಿತವಾಗಿ ಬಂದಿರುತ್ತವೆ. ಪಿತ್ರಾರ್ಜಿತ ಆಸ್ತಿಗಳೆಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿದ್ದೇನೆ. ದಾವಾ ಎ ಶೆಡ್ಯೂಲ್ ನ ಐಟಂ ನಂಬರ್ 1, 2 ಆಸ್ತಿಗಳು ನಮ್ಮ ತಂದೆಯ ಸ್ವಯಾರ್ಜಿತ ಆಸ್ತಿಗಳು ಎನ್ನುವುದು ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯಕೋರಿದ್ದಾರೆ.**

(ತೆರೆದ ನ್ಯಾ . ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೇ ಸರಿ ಇದೆ.

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಹರಿಹರ.